ಎಸ್.ಸಿ.12/2024,                ಪಿ.ಡಬ್ಲ್ಯೂ1        ಹೆಸರುಃ ಮಹೇಂದ್ರ ಪ್ರಸಾದ್

**ದಿಃ12-01-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಾದಿಯ ಪರ ಶ್ರೀ ಕೆ.ಎಸ್.ಎಂ. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಪ್ರತಿವಾದಿಯು ನಮ್ಮ ಬ್ಯಾಂಕಿಗೆ ಸಾಲವನ್ನು ಪಡೆಯುವ ಸಲುವಾಗಿ ನೀಡಿದಂತಹ ದಿನಾಂಕಃ21.07.2018 ರ ಸಾಲದ ಅರ್ಜಿಯನ್ನು ಹಾಜರುಪಡಿಸಿದ್ದು ನಿಪಿ-1 ಎಂದು ಗುರುತಿಸಲಾಯಿತು.

ಪ್ರತಿವಾದಿಯು ನಮ್ಮ ಬ್ಯಾಂಕಿಗೆ ಸಾಲ ಪಡೆಯುವ ಕಾಲಕ್ಕೆ ನೀಡಿದ್ದಂತಹ ಅರ್ಜಿಯ ಕುರಿತು ಸಾಲವನ್ನು ಮಂಜೂರಾತಿ ಮಾಡಿದಂತಹ ದಾಖಲಾತಿಯನ್ನು ಹಾಜರುಪಡಿಸಿದ್ದು, ನಿಪಿ-2 ಎಂದು ಗುರುತಿಸಲಾಯಿತು.

ಪ್ರತಿವಾದಿಯು ಪಡೆದಂತಹ ಸಾಲದ ಕುರಿತು ಜಾರಿಮಾಡಿಕೊಟ್ಟಂತಹ ಸಾಲದ ಕರಾರು ಪತ್ರವನ್ನು ಹಾಜರುಪಡಿಸಿದ್ದು ನಿಪಿ-3 ಎಂದು ಗುರುತಿಸಲಾಯಿತು.

ಪ್ರತಿವಾದಿಯು ಪಡೆದುಕೋಂಡಂತಹ ಸಾಲದ ಕುರಿತು ನಮ್ಮ ಬ್ಯಾಂಕಿಗೆ ಮಾಡಿಕೊಟ್ಟಂತಹ ಸಾಲದ ನವೀಕರಣ ಕುರಿತಾದ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

ಪ್ರತಿವಾದಿಯು ಪಡೆದ ಸಾಲವನ್ನು ಮರುಪಾವತಿ ಮಾಡದ ಕಾರಣ ಪ್ರತಿವಾದಿಗೆ ನೀಡಿರುವ ಕಾನೂನು ತಿಳುವಳಿಕೆ ನೋಟೀಸನ್ನು ಹಾಜರುಪಡಿಸಿದ್ದು ನಿಪಿ-6 ಎಂದು ಗುರುತಿಸಲಾಯಿತು.

ಪ್ರತಿವಾದಿಗೆ ಸಂಬಂಧಿಸಿದ ಸಾಲದ ಎಕ್ಸ್ಟ್ರಾಕ್ಟ್‌ನ್ನು ಹಾಜರುಪಡಿಸಿದ್ದು ನಿಪಿ-7 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ